



ಕಾಣೆಯಾಗುವಂತೆ ಮಾಡಿದೆ. ಹೀಗೆ ಹಲವು ಕಾರಣಗಳಿಂದ ಮರೆವೆಗೆ ಸಂದಿರುವ, ಪಠ್ಯಪುಸ್ತಕಗಳಲ್ಲೂ ಅಪರೂಪವಾದ ಮುಖ್ಯ ಕವಿಗಳಲ್ಲಿ ಗಂಗಾಧರ ಚಿತ್ತಾಲರೂ (1923-1987) ಒಬ್ಬರು. 'ಮಯೂರ'ದಲ್ಲಿ ಈ ಬರವಣಿಗೆಯನ್ನು ಓದುತ್ತಿರುವ ಅನೇಕರು ಅವರ ಕವಿತೆಗಳನ್ನು ಓದಿರುವುದಿಲ್ಲ. ನಿಮ್ಮಲ್ಲಿ ಕೆಲವರಾದರೂ ಇವರ ಕವಿತೆಗಳನ್ನು ಹುಡುಕಿಕೊಂಡು ಓದಲಿ ಎಂಬ ಹಂಬಲದೊಂದಿಗೆ ಬರೆಯುತ್ತಿದ್ದೇನೆ. ಅವರು ನಾವೆಲ್ಲರೂ ಒಳಗಿಟ್ಟುಕೊಂಡು ಧ್ಯಾನಿಸಬೇಕಾದ ಕವಿತೆಗಳನ್ನು, ಮನ ಕಲಕುವಂತೆ, ಮನ ತಲುಪುವಂತೆ ಬರೆದಿದ್ದಾರೆ. ಅವರ ಕವಿತೆಯ ರುಚಿ ಗೊತ್ತಿರುವ 'ಕವಿತೆ-ಮರುಳ'ರಿಗೆ ನಾನು ಹೇಳುವುದೇನಿದೆ? ಅನೇಕ ಮುಖ್ಯ ಲೇಖಕರು ಮತ್ತು ವಿಮರ್ಶಕರು ಈಗಾಗಲೇ ಅವರ ಬಗ್ಗೆ ಬರೆದಿದ್ದಾರೆ. ಅವರ ಕಾವ್ಯವನ್ನು ಕುರಿತ ಗಂಭೀರ ವಾಗ್ವಾದವೂ ನಡೆದಿದೆ. ಈ ಬರವಣಿಗೆಗೆ ಅವರ ಅನಿಸಿಕೆಗಳು ಹಿನ್ನೆಲೆಯಾಗಿವೆ.

ಒಂದು ಅರ್ಥದಲ್ಲಿ ಚಿತ್ತಾಲರು